ದೊಡ್ಡದೊಂದು ಆಂದೋಲನವೇ ಅಗತ್ಯವಿದೆ. ಸದ್ಯಕ್ಕಂತೂ – ನಾರಾಯಣ ನೇತ್ರಾಲಯ 'ಡಾ. ರಾಜ್‌ಕುಮಾರ್ ನೇತ್ರದಾನ ಕೇಂದ್ರ', ಮಿಂಟೊ ಕಣ್ಣಿನ ಆಸ್ಪತ್ರೆಯ 'ಚೆಲರಾಮ್ ಐ ಬ್ಯಾಂಕ್', ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್, ಶಂಕರ್ ಕಣ್ಣಿನ ಆಸ್ಪತ್ರೆ, ಕ್ರಿಸ್ಟೊಫರ್ ಬ್ಲೈಂಡ್‌ನೆಸ್ ಮಿಷನ್ – ಇವುಗಳೆಲ್ಲ ನೇತ್ರದಾನ ಮಾಡಿಸುವ ಕಾರ್ಯದಲ್ಲಿ ತೊಡಗಿಕೊಂಡಿವೆ. ಇವೆಲ್ಲವೂ ಬೆಂಗಳೂರು ಕೇಂದ್ರಿತ ಎನ್ನುವುದು ಗಮನಾರ್ಹ.

**ಮಿಂಟೊ ಕಣ್ಣಿನ ಆಸ್ಪತ್ರೆಯ ನೇತ್ರದಾನದ ಅಂಕಿ-ಅಂಶ**

| ವರ್ಷ | ನೋಂದಣಿದಾರರು | ಸಂಗ್ರಹಿಸಿದ ಕಣ್ಣುಗಳು |
|---|---|---|
| 2014 | 1593 | 251 |
| 2015 | 1618 | 232 |
| 2016 | 1859 | 189 |
| 2017 | 670 | 212 |
| 2018 | 1429 | 296 |
| 2019* | 1060 | 189 |

(*2019 ಸೆ. ವರೆಗೆ)



## ದೀಪಧಾರಿಗಳು

ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿನ ನೇತ್ರನಿಧಿಗಳಷ್ಟೇ ಅಲ್ಲ, ವೈಯಕ್ತಿಕ ನೆಲೆಯಲ್ಲಿಯೂ ನೇತ್ರದಾನದ ಅರಿವು ಮೂಡಿಸುವ ಕೆಲಸಗಳು ಅಲ್ಲಲ್ಲಿ ನಡೆಯುತ್ತಿವೆ. ಹಾಗೆ ನೋಡಿದರೆ ನೇತ್ರದಾನದ ಬೀಜ ನಮ್ಮ ಪುರಾಣ ಪರಂಪರೆಯಲ್ಲೇ ಇದೆ. 'ಬೇಡರ ಕಣ್ಣಪ್ಪ' ಕಥೆಯಲ್ಲಿ ಶಿವನ ಮೂರ್ತಿಗೆ ಕಣ್ಣು ಮೂಡಿ, ಆ ಕಣ್ಣುಗಳಿಂದ ರಕ್ತ ಹರಿಯುವುದನ್ನು ಕಂಡ ಬೇಡರ ದಿನ್ನ, ತನ್ನ ಕಣ್ಣನ್ನೇ ಕಿತ್ತು ಶಿವಲಿಂಗಕ್ಕೆ ಇಡುತ್ತಾನೆ. ಶಿವನಿಗೆ ಕಣ್ಣು ನೀಡುವ ಮೂಲಕ ಬೇಡರ ದಿನ್ನ ಕಣ್ಣಪ್ಪ ಎನ್ನಿಸಿಕೊಳ್ಳುತ್ತಾನೆ. ಆಧುನಿಕ ಕಣ್ಣಪ್ಪಂದಿರೂ ಇದ್ದಾರೆ. ದೊಡ್ಡಬಳ್ಳಾಪುರದ ಎಂ.ಬಿ. ಗುರುದೇವ ಅವರ ನೇತ್ರಕಾಯಕವನ್ನು ನೋಡಿ; ಸಾವಿನ ಸುದ್ದಿ ಕಿವಿಗೆ ಬಿದ್ದರೆ ಸಾಕು, ಅಲ್ಲಿಗೆ ಧಾವಿಸುವ ಅವರು ಮೃತರ ಕಣ್ಣುಗಳನ್ನು ದಾನ ಮಾಡುವಂತೆ ಸಂಬಂಧಿಸಿದವರ ಮನ ಒಲಿಸಲು ಪ್ರಯತ್ನಿಸುತ್ತಾರೆ. ಸ್ವತಃ ನೇತ್ರದಾನದ ಸಂಕಲ್ಪ ತೊಟ್ಟ ಅವರು ಪತ್ನಿ ಹಾಗೂ ಸಂಬಂಧಿಕರನ್ನೂ ನೇತ್ರದಾನಿಗಳ ಪಟ್ಟಿಗೆ ಸೇರಿಸಿದ್ದಾರೆ.

ಬೆಂಗಳೂರಿನ ಪ್ರೊ. ಶೈಲಜಾ ತಾವು ಹೋದಲ್ಲೆಲ್ಲ ನೇತ್ರದಾನದ ನೋಂದಣಿ ಪತ್ರಗಳನ್ನು ಜೊತೆಗೆ ಕೊಂಡೊಯ್ಯುತ್ತಾರೆ. ಮಾತಿಗೆ ಸಿಕ್ಕಿದವರಿಗೆಲ್ಲ ನೇತ್ರದಾನದ ಮಹತ್ವವನ್ನು ಮನಗಾಣಿಸಲು ಪ್ರಯತ್ನಿಸುತ್ತಿದ್ದಾರೆ. ಗುರುದೇವ, ಶೈಲಜಾ ಅವರಂಥವರ ಪರಿಶ್ರಮದ ನಂತರವೂ ನೇತ್ರದಾನದ ಸಂಖ್ಯೆಯೇನೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿಲ್ಲ. ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿನ ಅಂಕಿಅಂಶಗಳ ಪ್ರಕಾರ ಪ್ರತಿನಿತ್ಯ ಒಂದು ನೇತ್ರದಾನ ಆಗುವುದೂ ಕಷ್ಟವಿದೆ.

'ಸುಮಾರು 300 ರಿಂದ 400 ಮಂದಿ ಸಾವನ್ನಪ್ಪುವ ಬೆಂಗಳೂರಿನಲ್ಲೇ ದಿನಕ್ಕೆ ಒಂದೂ ನೇತ್ರದಾನ ಆಗುವುದಿಲ್ಲ. ಆಗಾಗ ಆಗುತ್ತದೆ ಅಷ್ಟೇ. ನೇತ್ರದಾನ ಆಗದಿರಲಿಕ್ಕೆ ಬೇರೆ ಬೇರೆ ಕಾರಣಗಳಿವೆ. ಮೃತರನ್ನು, ಅವರ ದೇಹದ ಯಾವುದೋ ಒಂದು ಭಾಗವಿಲ್ಲದೇ ಅಂತ್ಯಸಂಸ್ಕಾರ ಮಾಡಿದರೆ ಮುಂದೆ ಆ ಅಂಗವಿಲ್ಲದೇ ಹುಟ್ಟುತ್ತಾರೆ ಎನ್ನುವ ನಂಬಿಕೆ ಜನರಲ್ಲಿದೆ. ಮುಸ್ಲಿಂ ಸಮುದಾಯದಲ್ಲಿ ನೇತ್ರದಾನಕ್ಕೆ ಅವಕಾಶವಿಲ್ಲ. ಹೀಗೆ ಹಿಂಜರಿಯುವವರು ಒಂದು ವಿಷಯವನ್ನು ಗಮನದಲ್ಲಿಡಬೇಕು: ನೇತ್ರದಾನದ ಮೂಲಕ ನಾವು ಸತ್ತ ನಂತರವೂ ಇನ್ನೊಬ್ಬರ ಮೂಲಕ ಈ ಲೋಕವನ್ನು ನೋಡುತ್ತಾ ಜೀವಂತವಾಗಿಡಬಹುದು' ಎನ್ನುತ್ತಾರೆ ಮಿಂಟೊ ಕಣ್ಣಿನ ಆಸ್ಪತ್ರೆಯ ನಿರ್ದೇಶಕಿ ಡಾ. ಬಿ.ಎಲ್. ಸುಜಾತಾ ರಾಥೋಡ್.

'ಕಣ್ಣು ಪಡೆದ ವ್ಯಕ್ತಿಗೆ ಕಣ್ಣು ದಾನವಾಗಿ ಕೊಟ್ಟ ವ್ಯಕ್ತಿ ದೇವ್ವವಾಗಿ ಕಾಡುತ್ತಾರೆ, ಕಣ್ಣು ದಾನ ಮಾಡಿದ ವ್ಯಕ್ತಿಯ ಜನ್ಮದ ನೆನಪುಗಳೂ ಕಾಡುತ್ತವೆ – ಇಂಥ ಮೌಢ್ಯಗಳು ಕೂಡ ನೇತ್ರದಾನದ ಹಿನ್ನಡೆಗೆ ಕಾರಣವಾಗಿವೆ. ನೇತ್ರದಾನ ಮಾಡಿಸುವುದು ನಮ್ಮ ಜವಾಬ್ದಾರಿ ಎನ್ನುವುದು ಸಾವಿನ ದುಃಖದಲ್ಲಿರುವವರಿಗೆ ಮರೆತುಹೋಗುವ ಸಾಧ್ಯತೆಯೂ ಇದೆ. ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಂತೂ ಮೃತರ ಸಂಬಂಧಿಕರಿಗೆ ಯಾವುದರ ಬಗ್ಗೆಯೂ ನೆನಪಾಗದು. ಸಾವಿನ ದುಃಖದಿಂದ ಹೊರಬಂದು ಮತ್ತೊಬ್ಬರ ಬಾಳಿಗೆ ಬೆಳಕಾಗಬೇಕು' ಎಂದು ಹೇಳುತ್ತಾರೆ ಅವರು.

ನೇತ್ರದಾನ ಎನ್ನುವುದು ಬೆಂಗಳೂರಿಗೆ ಮಾತ್ರ ಸೀಮಿತವಾಗಿದೆಯೇ ಎನ್ನುವ ಪ್ರಶ್ನೆಗೆ, 'ಎಲ್ಲ ರೀತಿಯ ದೊಡ್ಡ ಆಸ್ಪತ್ರೆಗಳು ಸೀಮಿತವಾಗಿರುವುದು ನಗರಗಳಿಗೇನೆ. ನೇತ್ರದಾನವೂ ಅದೇ ರೀತಿ ಎನ್ನಬಹುದು. ನೇತ್ರದಾನಕ್ಕೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ಜಿಲ್ಲಾ– ತಾಲ್ಲೂಕು ಮಟ್ಟದಲ್ಲಿ

